# ನೀವು ಕೇಳಿದಿರಿ?

ದಮಯಂತಿ ಸಿ.ಆರ್, ಕೊಡಗು

*ರಾಜಕಾರಣಿಗಳು ಗೆಲ್ಲೋಕೆ ಮುಂಚೆ ಕಾಲು ಹಿಡಿಯುತ್ತಾರೆ, ನಂತರ ಕಾಲು ಎಳೆಯುತ್ತಾರೆ ಅಲ್ವಾ ಸರ್?*



ಮೊದಲು packets ಹಂಚುತ್ತಾರೆ, ನಂತರ pockets ಸುಲಿಯುತ್ತಾರೆ ಎಂಬುದು ಈಗಿನ (ಅ)ಕ್ರಮ!

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

*ವಿದ್ಯಾವಂತರು ಇರುವ ಕಡೆಯೇ ಮತದಾನ ಏಕೆ ಕಡಿಮೆಯಾಗುತ್ತಿದೆ?*

ವಿವೇಕವಿಲ್ಲದ ವಿದ್ಯೆಯೂ ವಿದ್ಯೆಯೇ? ಮತ ಹಾಕದವರು ವಿದ್ಯಾವಂತರಲ್ಲ, ಬರಿದೇ ಸರ್ಟಿಫಿಕೇಟ್‌ವಂತರಷ್ಟೆ!

ಕುಬೇರಪ್ಪ ಎಂ.ವಿಭೂತಿ, ಹರಿಹರ

*ವೋಟು ಕೊಡಲು ನೋಟು ಕೊಟ್ಟ ಗಣ್ಯರ ಮೇಲೆ ಬೂಟು ಎಸೆಯುವುದೇಕೆ?*

ಅವರ ಬೂಟಾಟಿಕೆಗೆ ಇವರ ಬೂಟ್ ಆಟಿಕೆಯೇ ಸರಿಯುತ್ತರವೆಂಬ ಅಭಿಪ್ರಾಯ!

ವಿದ್ಯಾ ಎನ್. ಪೈ, ಕಾಸರಗೋಡ

*ರಾಜಕಾರಣಿಗಳಿಗೆ ಕಡ್ಡಾಯ ನಿವೃತ್ತಿ ಏಕಿಲ್ಲ?*

ನಿವೃತ್ತಿಯಾಗಲು ವೃತ್ತಿ ಇರಬೇಕು. ರಾಜಕಾರಣ ವೃತ್ತಿಯಲ್ಲ, ಪ್ರವೃತ್ತಿ!

ಆರ್.ವಿಜಯಲಕ್ಷ್ಮಿ, ಕೊಳ್ಳೇಗಾಲ

*ಆಣೆ-ಪ್ರಮಾಣಗಳಲ್ಲಿರುವ ನಂಬಿಕೆಗಳು ರಾಜಕೀಯ ನಾಯಕರಿಂದ ಕಡಿಮೆಯಾಗುತ್ತಿದೆಯೆ?*

ನಾಯಕರೇ ಅಲ್ಲ, ಯಾರಲ್ಲೇ ಆದರೂ ಮೋಹದ ಪ್ರಮಾಣ ಹೆಚ್ಚಿದರೆ ಆಣೆ–ಪ್ರಮಾಣ ಕಾಣೆ!

ಎಂ.ಎಸ್.ಧರ್ಮೇಂದ್ರ, ಜಿ.ಟಿ.ಆರ್.ಇ. ಕ್ಯಾಂಪಸ್

*ಮನದೊಡತಿ ಮನೆಯೊಡತಿ ಆಗದಿರಲು ಕಾರಣವೇನು?*

ನೀವೇ! ಮನದೊಡತಿಗೆ ನಿಮ್ಮ ಮನೆ ಬರೆದುಕೊಡಿ, ತಕ್ಷಣ ಮನೆಯೊಡತಿಯಾಗುವಳು!

## ಬಹುಮಾನಿತ ಪ್ರಶ್ನೆ

ಎ.ಕೆ.ಪಟ್ಟಾಭಿ, ಬೆಂಗಳೂರು

*ಆಂಬುಲೆನ್ಸ್ ಮೇಲಿನ ಬರಹ ತಲೆಕೆಳಕಾಗಿ ಇರುವುದು ಬಹುಶಃ ರೋಗಿ ಬದುಕುಳಿಯುವ ಲೆಕ್ಕಾಚಾರ ತಲೆಕೆಳಗಾಗಬಹುದೆಂದು ಸೂಚಿಸಲೆಂದೇ?*

ನಿಜವೇ. ಅಂತೆಯೇ + ಚಿಹ್ನೆಯೂ ಡಾಕ್ಟರ್‌ನ ಅಕೌಂಟ್‌ಗೆ ಇನ್ನೊಂದು ಬಲಿಯ ಸೇರ್ಪಡೆ ಎಂದು ಸೂಚಿಸುವುದಂತೆ!

ಬಿ.ಪಿ.ವೆಂಕಟೇಶ್, ಬೋಧನಹೊಸಹಳ್ಳಿ

*ಯುವತಿಯರನ್ನು ಸೌಂದರ್ಯ ಸ್ಪರ್ಧೆಗೆ, ವೃದ್ಧರನ್ನು?*

ಅವರನ್ನೂ ಅದೇ ಸ್ಪರ್ಧೆಗೇ, ತೀರ್ಪುಗಾರರಾಗಿ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು

*ದೇವರುಗಳ ಹೆಸರಿನ ಹಿಂದೆ ಇನಿಷಿಯಲ್ ಇಲ್ಲವಲ್ಲ, ಏಕೆ?*

ಅವರುಗಳ ಹುಟ್ಟಿಗೆ ಯಾರೂ ಕಾರಣರಲ್ಲವಾದ್ದರಿಂದ!

ಮಾಲತಿರಾಜು, ಬೆಂಗಳೂರು

*ಅಂದು ರಾಮ ಸೀತೆಯ ಸ್ವೀಕಾರಕ್ಕೆ ಮುನ್ನ ಅಗ್ನಿಗೊಡ್ಡಿದ, ಇಂದು ರಾಮ ಪ್ರಶ್ನೆ ಸ್ವೀಕಾರಕ್ಕೆ ಅದೇ ನೀತಿ ಅನುಸರಿಸುವರೇ?*

ತುಪ್ಪದ ಬೆಲೆ ಏರಿರುವುದರಿಂದ ಹೋಮಕುಂಡ ಬಂದ್, ಬರಿದೇ ಒರೆಗೆ ಹಚ್ಚಿ ನೋಡುವುದಷ್ಟೆ!

ಪ್ರಿಂಟ್ ಶೇಖರಿ, ಗೌರಿಬಿದನೂರು


*ಪೊಲೀಸರಿಗೆ ತರಬೇತಿ ನೀಡುವಾಗ ಸಾರ್ವಜನಿಕರೊಡನೆ ಪಕ್ಕಾ 420 ರೌಡಿ ಭಾಷೆಯಲ್ಲಿ ವರ್ತಿಸಲು ಕಲಿಸುವರೇ?*



ಛೆ! ಇದನ್ನು ಅವರು ಗುರುಗಳ ಸಹಾಯವಿಲ್ಲದೆಯೇ ಸ್ವಂತ ಪರಿಶ್ರಮದಿಂದ ಕಲಿತಿರುತ್ತಾರೆ!

ಜೆ.ಪ್ರದೀಪಕುಮಾರ, ಹೂವಿನಹಡಗಲಿ

*ಯಾವ ಕೆಲಸಕ್ಕೆ ಅರ್ಜಿ ಹಾಕಿದರೂ ಅನುಭವಕ್ಕೆ ಆದ್ಯತೆ; ಮದುವೆಗೆ?*




ಅದಕ್ಕೂ ಅಷ್ಟೆ, ಹೆಣ್ಣಿನ ಮಾತಿಗೆ ಗೋಣು ಹಾಕುವ ಅನುಭವವಿರುವವರಿಗೆ ಆದ್ಯತೆ!

ಮಲ್ಲನಗೌಡ ಸಿ ಪಾಟೀಲ, ಬಾಗಲಕೋಟೆ

*ಬಸ್ಸಿನಲ್ಲಿ ವಯಸ್ಸಾದವರು ಬಂದರೆ ಸೀಟು ಬಿಟ್ಟುಕೊಡದ ಹುಡುಗರು ಹುಡುಗಿಯರಿಗೆ ಥಟ್ಟನೆ ಬಿಟ್ಟುಕೊಡುವರಲ್ಲಾ..?*

ಆಯಸ್ಸಾದವರಲ್ಲಿರದ ಆಯಸ್ಕಾಂತ ಶಕ್ತಿ ಇಲ್ಲಿರುವುದರಿಂದ!

ಡಿ.ಎಲ್.ಶ್ವೇತಾ, ಹರಪನಹಳ್ಳಿ

*ಹಾಗಲಕಾಯಿಗೆ ಬೇವಿನಕಾಯಿಯೇ ಸಾಕ್ಷಿ, ಬಿಜೆಪಿಗೆ?*

ಆಂತರಿಕ ಕಚ್ಚಾಟದ ಹುಳಿ ದ್ರಾಕ್ಷಿ!

ರವೀಂದ್ರ ಬಿ.ಜೆ, ಹಾಸನ

*ವಿದೇಶದಲ್ಲಿರುವ ಕಪ್ಪುಹಣ ಮರಳಿ ನಮ್ಮ ದೇಶಕ್ಕೆ ಬರುವುದು ಯಾವಾಗ ಸಾರ್?*

ನಮ್ಮಲ್ಲಿಯೇ ಸ್ವಿಸ್ ಬ್ಯಾಂಕ್‌ಗಳು ಶಾಖೆಗಳನ್ನು ತೆರೆದಾಗ!

ಪಿ.ಎಸ್.ಶ್ರೀವತ್ಸ, ಬೆಂಗಳೂರು

*ಮದುವೆಯ ಆಮಂತ್ರಣಪತ್ರಿಕೆಯಲ್ಲಿ ಇದುವರೆವಿಗೂ ಬಸ್‌ರೂಟ್ ಪ್ರಿಂಟ್ ಮಾಡುತ್ತಿದ್ದುದು ಇತ್ತೀಚೆಗೆ ಕಾಣದಾಗುತ್ತಿರುವ ಕಾರಣ...?*

ಬಸ್‌ನಲ್ಲಿ ಬರುವವರು ಬೆಲೆಬಾಳುವ ಉಡುಗೊರೆ ತರಲಾರರೆಂದು!

ಗಾಯತ್ರಿ, ರಾಜಾಜಿನಗರ

*ಕಮಲ ಬಂದ ಮೇಲೆ ಕಳ್ಳತನ, ಕೊಲೆಗಳು ಜಾಸ್ತಿಯಾಗಿದೆಯಲ್ಲಾ...?*

ವಿರೋಧ ಪಕ್ಷದ ಕೈವಾಡ ಎಂದರಂತೆ ಮು.ಮಂ.

■ ರಾಮ್